**ಓ.ಎಸ್ ನಂ. 93/2023 ಡಿ.ಡಬ್ಲ್ಯೂ-2 ( ವೀರಭದ್ರೇಗೌಡ)**

**ಸಾಕ್ಷಿಯನ್ನು ದಿನಾಂಕಃ 18.09.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಎಂ ಎನ್ ಆರ್ ವಕೀಲರಿಂದಃ**

ಪ್ರಸ್ತುತ ದಾವೆಯನ್ನು ಯಾರು ಯಾವ ಸ್ವತ್ತಿಗೆ ಸಂಬಂಧಿಸಿದಂತೆ ಯಾರ ಮೇಲೆ ದಾವೆ ಮಾಡಿರುತ್ತಾರೆ ಎಂದು ನೀವು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿಯ ಇಲ್ಲ ಎಂದು ನುಡಿಯುತ್ತಾರೆ. ದಾವಾಸ್ತಿ ಸ. ನಂ 8 ರ ಜಮೀನು ಮೂಲ ಇಬ್ರಾಹಿಂ ಎಂಬವರಿಗೆ ಸೇರಿತ್ತು. ಸದರಿ ಇಬ್ರಾಹಿಂ ಎಂಬವರಿಗೆ ದಾವಾಸ್ತಿಯು ಸೇರಿತ್ತು ಎಂದು ತೋರಿಸಲು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಇಬ್ರಾಹಿಂ ಎಂಬವರು ಶಿವಮೊಗ್ಗದವರಾಗಿದ್ದು ಅವರಿಗೆ ದಾವಾಸ್ತಿಯು ಸರ್ಕಾರದಿಂದ ಮಂಜೂರಾಗಿರುತ್ತದೆ. ಸರ್ಕಾರದಿಂದ ಮಂಜುರಾದ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ಅವರೇ ಹಾಜರುಪಡಿಸಿದ ದಾಖಲಾತಿಯನ್ನು ತೋರಿಸಿ ಇದರಲ್ಲಿ ಯಾವುದು ಇಬ್ರಾಹಿಂ ಎಂಬವರಿಗೆ ಸಾರ್ಕಾರದಿಂದ ಮಂಜುರಾಗಿರುತ್ತದೆ ಎಂಬ ದಾಖಲಾತಿ ಎಂದರೆ ಸಾಕ್ಷಿಯು ನಿಡಿ 19 ಕೇತ್ವಾಲಿನ ದೃಡೀಕೃತ ನಕಲು ತೋರಿಸಿರುತ್ತಾರೆ. ಸದರಿ ದಾಖಲಾತಿಯು ಸಾಗುವಳಿ ಪತ್ರ ಆಗಿರುವುದಿಲ್ಲ ಎಂದರೆ ಸರಿ. ನಿಡಿ 19 ಮತ್ತು ಸದರಿ ಇಬ್ರಾಹಿಂ ರವರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ ದಾವಾ ಆಸ್ತಿಯು ಸದರಿ ಇಬ್ರಾಹಿಂ ರವರಿಗೆ ಸೇರಿರುತ್ತದೆ ಎಂದು ತಿಳಿಸಿರುವುದಿಲ್ಲ. ನಾನು ಹಾಜರುಪಡಿಸಿವಂತಹ ದಾಖಲಾತಿಗಳು ಸೃಷ್ಟಿ ಮಾಡಿ ಹಾಜರುಪಡಿಸಿದ ದಾಖಲಾತಿಗಳಾಗಿರುತ್ತವೆ ಎಂದರೆ ಸರಿಯಲ್ಲ. ನಮಗೆ ದಾವಾಸ್ತಿಯನ್ನು

ಮಾರಾಟ ಮಾಡಿರುತ್ತಾರೆ ಎಂದು ಹೇಳಲಾದ ಕ್ರಯದಾರರಿಗೆ ದಾವಾಸ್ತಿಯನ್ನು ಮಾರಾಟ ಮಾಡಲು ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ.

ದಾವಾಸ್ತಿಯು ಮೂಲತಃ ಮಹಮ್ಮದ್ ಸಾಬ್ ರವರ ಮಗ ಸಾಬುಲಾಲ್ ಉ. ಸೈಯದ್ ಸಾಬು ಲಾಲ್ ರವರಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ.

ನಾನು 9 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಸಾಕ್ಷಿಗೆ ನಿಪಿ 1 ಅನ್ನು ತೋರಿಸಿ ಅದರಂತೆ ದಾವಾಸ್ತಿಯು ಸಾಬುಲಾಲ್ ಉ. ಸೈಯದ್ ಸಾಬುಲಾಲ್ ರವರ ಹೆಸರಿಗೆ ತೋರಿಸಲಾಗಿರುತ್ತದೆ ಎಂದರೆ ಸಾಕ್ಷಿಯು ಅದು ಸುಳ್ಳಾಗಿ ತೋರಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ 2 ರಂತೆ ಸದರಿ ಸಾಬುಲಾಲ್ ರವರ ಹೆಸರಿನಲ್ಲಿ ದಾವಾಸ್ತಿಯು 1975-76 ರಿಂದ 1979-80 ರ ಸಾಲೀನ ವರೆಗೂ ಅವರ ಹೆಸರಿನಲ್ಲಿ ತೋರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಅವರೇ ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ನಿಪಿ 1 ಮತ್ತು 2 ಅನ್ನು ನಾವು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ, ಸಾಕ್ಷಿಯು ಮುಂದುವರಿದು ಆ ದಾಖಲಾತಿಗಳು ನಮಗೆ ಸಿಕ್ಕಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ 3 ರಲ್ಲಿ ಸಾಬುಲಾಲ್ ರವರ ಹೆಸರಿನ ಜೊತೆಯಲ್ಲಿ ನನ್ನ ತಂದೆಯರಾದ ತಮ್ಮೇಗೌಡರ ಹೆಸರು ಸಹ ಇರುತ್ತದೆ ಮತ್ತು ಸದರಿ ಪಹಣಿ ಪತ್ರಿಕೆಯಲ್ಲಿ ತೋರಿಸಿರುವ ಸಾಬುಲಾಲ್ ಹೆಸರು ಹೇಗೆ ಬರುತ್ತಿರುತ್ತದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಸಾಬುಲಾಲ್ ರವರಾಗಲೀ ಅವರ ಮಕ್ಕಳಾಗಲೀ ಅಥವಾ ವಾದಿಗಳಾಗಲೀ ಯಾರು ಸಹ ನನ್ನ ತಂದೆಯವರಿಗೆ ಮತ್ತು ನನಗೆ ಮಾರಾಟ ಮಾಡಿರುವುದಿಲ್ಲ. ದಾವಾಸ್ತಿಯು ಮೂಲತಃ ಸಾಬುಲಾಲ್

ರವರಾದಾಗಿದ್ದು, ಅವರಾಗಲೀ ಅಥವಾ ಅವರ ಕುಟುಂಬದವರು ಯಾರು ದಾವಾಸ್ತಿಯನ್ನು ಮಾರಾಟ ಮಾಡಿರುವುದಿಲ್ಲ ಆದರೂ ಸಹ ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡು ನಮಗೆ ಮಾರಾಟ ಮಾಡಿರುತ್ತಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದ ಖಂಡಿಕೆ 11 ರಲ್ಲಿ ಹೇಳಿರುವಂತೆ ಅಯಾಸಾಬಿ ಉ. ಇಮಾಮ್ ಸಾಬ್ ಎಂಬುವರಿಗೆ ಸರ್ಕಾರದಿಂದ ಮಂಜೂರಾಗಿ ಸಾಗುವಳಿ ಚೀಟಿ ಇರುತ್ತದೆ ಎಂದು ತಿಳಿಸಿದ್ದು, ಸದರಿ ಸಾಗುವಳಿ ಚೀಟಿಯನ್ನು ನಾನು ನೋಡಿರುವುದಿಲ್ಲ. ನಾನಾಗಲೀ ಅಥವಾ ನನ್ನ ತಂದೆಯವರು ಸದರಿ ಅಯಾಸಾಬಿ ಉ. ಇಮಾಮ್ ಸಾಬ್ ರವರನ್ನು ನೋಡಿರುವುದಿಲ್ಲ. ಅದೇ ರೀತಿ ಸದರಿ ಅಯಾಸಾಬಿ ಉ. ಇಮಾಮ್ ಸಾಬ್ ರವರು ಅಂತರಸಂತೆಯಲ್ಲಿ ಎಲ್ಲಿ ವಾಸವಾಗಿದ್ದರು ಎಂದು ಸಹ ನನಗೆ ತಿಳಿದಿರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದ ಖಂಡಿಕೆ 12 ರಲ್ಲಿ ಹೇಳಿರುವ ವಿಷಯವು ನನಗೆ ದಿಃ 11.03.1970 ರಂದು ಆದ ಕ್ರಯ ಪತ್ರದ ದೃಡೀಕೃತ ನಕಲಿನಿಂದ ತಿಳಿದು ಬಂದಿರುತ್ತದೆ ಮತ್ತು ಆ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ನನ್ನ ಬಳಿ ಸದರಿ ದಾಖಲಾತಿಯ ಮೂಲ ಪತ್ರ ಇರುವುದಿಲ್ಲ.

ಸಾಮಾನ್ಯವಾಗಿ ಯಾರಾದರೂ ಜಮೀನನ್ನು ಖರೀದಿಸುವ ಸಮಯ ಆಯಾ ಜಮೀನಿನ ಮೂಲ ದಾಖಲಾತಿಗಳನ್ನು ಪರೀಶೀಲಿಸಿ ಖರೀದಿಸಲಾಗುತ್ತದೆ ಎಂದರೆ ಸರಿ. ಅದೇ ರೀತಿ ದಾವಾಸ್ತಿಯನ್ನು ನಿಜವಾಗಲೂ ಖರೀದಿಸಿದ್ದೆ ಆದಲ್ಲಿ ಮೂಲ ದಾಖಲಾತಿಗಳನ್ನು ಪಡೆದುಕೊಳ್ಳುತ್ತಿದ್ದೆವು ಎಂದರೆ ಸಾಕ್ಷಿಯು ಸದರಿ ದಾಖಲಾತಿಗಳ ದೃಡೀಕೃತ ನಕಲನ್ನು ಪಡೆದುಕೊಂಡು ಖರೀದಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ಆದುದ್ದರಿಂದ ನಿಮ್ಮ ಬಳಿ ಮೂಲ ಪತ್ರಗಳು ಇರುವುದಿಲ್ಲ ಎಂದರೆ ಸಾಕ್ಷಿಯು ಹಿಂದಿನ ಜನ ಆ ಪತ್ರಗಳನ್ನು ಇಟ್ಟು ಕೊಂಡಿರುವುದಿಲ್ಲ ಎಂದು

ನುಡಿಯುತ್ತಾರೆ. ನನ್ನ ತಂದೆಯವರು ದಾವಾಸ್ತಿಯನ್ನು ಖರೀದಿಸಿರುತ್ತಾರೆ ಎಂದು ಹೇಳಲಾದ ಜಮೀನನ್ನು ಖರೀದಿಸುವ ಸಮಯದಲ್ಲಿ ಯಾವ ಯಾವ ದಾಖಲಾತಿಗಳನ್ನು ನನ್ನ ತಂದೆಯವರು ಪಡೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳು ಪ್ರಸ್ತುತ ದಾವೆಯನ್ನು ಸಲ್ಲಿಸಿದ ನಂತರ ಪಡದು ಕೊಂಡಂತಹ ದಾಖಲಾತಿಗಳು ಎಂದರೆ ಸರಿ.

ಈ ದಾವೆಯ ವಾದಿಗಳನ್ನು ನಾನು ನೋಡಿರುವುದಿಲ್ಲ. ಅಂತರಸಂತೆಯಲ್ಲಿ ನನಗೆ ಮನೆ ಮತ್ತು ಜಾಗ ಇರುತ್ತದೆ. ಅಂತರಸಂತೆಯಲ್ಲಿ ವಾಸವಿದ್ದೇನೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ, ಸಾಕ್ಷಿಯು ಮುಂದುವರಿದು ನಾನು ಅಂತರಸಂತೆಯಲ್ಲಿ ಮತ್ತು ಹೊಸ ಹೊಳಲು ಎರಡು ಕಡೆಯಲ್ಲೂ ವಾಸವಿರುತ್ತೇನೆ ಎಂದು ನುಡಿಯುತ್ತಾರೆ.

**ಮುಂದುವರಿದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ